ಅವರಿಗೆ ತಾಗುವಂತೆ ಪೂಜಾರಿಗಳು ಎಳೆದು ಮುಚ್ಚುವ ಕದಗಳು ದಿನಕ್ಕೆ ಮುಕ್ಕಾಲು ಭಾಗ ಅವರನ್ನು ನೋಯಿಸುತ್ತವೆ. ಭೇಟಿಯಾಗಲು, ಸ್ಪರ್ಶಿಸಲು, ಹೆಗಲಿಗೆ ಹೆಗಲು ತಾಗಿಸಿ ನಡೆಯಲು, ಹರಟೆ ಹೊಡೆಯುತ್ತಾ ಹೆಜ್ಜೆಹಾಕಿ ಸಮಯ ಕಳೆಯಲು ಅವರಿಗೆ ಆಶೆ. ಆದರೆ ಮಂತ್ರಗಳಿಂದ ಮಂಟಪಗಳಲ್ಲಿ ಶಾಶ್ವತವಾಗಿ ನೆಲೆಯೂರಿದ ದೇವಿ ಮತ್ತು ದೇವನಿಗೆ ಮಿಸುಕಾಡಲು ಕೂಡ ಸಾಧ್ಯವಾಗಲಿಲ್ಲ. ಅದೊಂದು ಗುಡುಗು, ಮಿಂಚು ಮತ್ತು ಮಳೆಯಿರುವ ರಾತ್ರಿ. ಅವರಿಬ್ಬರು ಸರ್ವಶಕ್ತಿಯನ್ನು ಒಟ್ಟುಗೂಡಿಸಿ, ಮೈಕೊಡವಿ ಎದ್ದು ನಿಂತರು. ಮಂಟಪಗಳು ಬಿರುಕು ಬಿಟ್ಟು ಒಡೆದು ಪುಡಿ ಪುಡಿಯಾದವು. ಬಾಗಿಲು ತೆರೆದುಕೊಂಡಿತು. ಮೆಟ್ಟಿಲುಗಳನ್ನು ಇಳಿದು, ಕವಾಟವನ್ನು ದಾಟಿ ಸಾರ್ವಜನಿಕ ರಸ್ತೆಯಲ್ಲಿ ಅವರು ಒಂದಾದರು. ಮಳೆಯಲ್ಲಿ ತೊಯ್ದು, ಚಳಿಯಲ್ಲಿ ನಡುಗಿ ಕೈಗಳನ್ನು ಹೆಣೆದು ಅವರು ನಡೆದರು. ದಾರಿ, ಕಾಡಿನತ್ತ ಸರಿದಾಗ ಪಾಳುಬಿದ್ದ ದೇಗುಲವೊಂದು ಕಾಣಸಿಕ್ಕಿತು. ಅಲ್ಲಿರುವ ವಿಗ್ರಹವನ್ನು ಯಾರೋ ಕಿತ್ತೊಯ್ದಿದ್ದರು. ಮಂಟಪದಲ್ಲಿ ಕುಳಿತು ಅವರು ಆಯಾಸ ಪರಿಹರಿಸಿಕೊಂಡರು. ಮಂತ್ರಗಳು ಪೂಜೆಗಳು ಇಲ್ಲದೇ ಇರುವುದರಿಂದ ಅವರು ಪರಸ್ಪರ ಬಳಸಿಕೊಂಡರು.

‘ನಾವು ಇದನ್ನೇ ಮನೆ ಮಾಡಿಕೊಳ್ಳೋಣವೇ?’

‘ಸರಿ’.

ದೇಗುಲ ಮನೆಯಾಯಿತು. ಮನೆಯಲ್ಲಿ ಒಲೆ ಹೊಗೆಯಾಡಿತು. ದೇವ ಮೊಲ, ಕಾಡುಹಕ್ಕಿಗಳನ್ನು ಹಿಡಿದುಕೊಂಡು ಬಂದ. ಮಾಂಸದಡುಗೆಯ ಘಮಲು ಸುತ್ತಲೂ ಪಸರಿಸಿತು. ದೇಗುಲದ ಮುಂದೆ ತರಗೆಲೆಗಳು ಬೀಳಲು ಹಿಂಜರಿದವು. ಬಿದ್ದವುಗಳನ್ನು ಗುಡಿಸಿ ಒಟ್ಟು ಮಾಡಿ ಆಗಾಗ ಉರಿಸಿದರು. ಬೂದಿ ಸೌತೆಬಳ್ಳಿಗಳಿಗೆ ಗೊಬ್ಬರವಾಯಿತು.

ದೇಗುಲದಲ್ಲಿ ಶಂಖನಾದ, ಗಂಟೆಯ ಸದ್ದುಗಳಿಗೆ ಬದಲಾಗಿಮಕ್ಕಳ ನಗು, ಅಳು, ಗೆಜ್ಜೆನಾದಗಳು ಎದ್ದು ಬಂದವು. ಕಾಡಿನ ಹುಲಿ, ಸಿಂಹ ಆನೆಗಳೆಲ್ಲಾ ಆ ಕುಟುಂಬ ಜೀವನವನ್ನು ದಿನವು ಕಂಡು ಕೈಮುಗಿದು ಮರಳಿದವು...

ದೇವಿ, ಶ್ರೀದೇವಿ ಸ್ವಪ್ನಗಳನ್ನು ಮನಸ್ಸಿನ ಬಂಗಾರದ ಪೆಟ್ಟಿಗೆಯಲ್ಲಿ ಜತನದಿಂದ ಇರಿಸಲಾಗುತ್ತಿತ್ತು. ಒಂದೊಂದು ನಾಣ್ಯವೆಂಬಂತೆ ಒಂದೊಂದು ಕನಸನ್ನೆತ್ತಿ ಊದಿ ಬಿಸಿ ಮಾಡಿ, ಕಥೆಗಳನ್ನು ಹೊಸೆದು ನನಗೆ ಪತ್ರಗಳನ್ನು ಬರೆದಳು. ಕಥೆಗಳಲ್ಲಿ... ಕುದುರೆಯ ಮೇಲೆ ಬರುವ ರಾಜಕುಮಾರನಾಗಿಯೂ ಮೋಟಾರ್ ಸೈಕಲ್ಲಿನಲ್ಲಿ ಹಾರುತ್ತಾ ಬರುವ ಸುಂದರನಾಗಿಯೂ, ಖಳನನ್ನು ಸದೆಬಡಿಯುವ ಸಿನಿಮಾ ನಾಯಕನಾಗಿಯೂ ನಾನು ತುಂಬಿನಿಂತೆ.

ಅಂದು ಆ ಊರಿನಲ್ಲಿ ನಾಲ್ಕೈದು ದೂರವಾಣಿಗಳು ಮಾತ್ರ ಇದ್ದವು. ಅವುಗಳಲ್ಲಿ ಒಂದು ಅಧ್ಯಕ್ಷರ ಮನೆಯಲ್ಲಿ ಮತ್ತೊಂದು ಬ್ಯಾಂಕಿನಲ್ಲಿ. ಬ್ಯಾಂಕಿನ ಫೋನಿಗೆ ಗೆಸ್ಟ್ ಹೌಸ್‌ಗೊಂದು ಹೆಚ್ಚುವರಿ ಸಂಪರ್ಕವಿತ್ತು.

## ಇಲ್ಲಿಯವರೆಗೆ



ಆಲಿಂಬ್ರದಲ್ಲಿನ ರಾಜಕೀಯ ವಾತಾವರಣ ಮನುಷ್ಯ ಮನುಷ್ಯರ ನಡುವೆ ದ್ವೇಷದ ಗೋಡೆಗಳನ್ನು ಕಟ್ಟತೊಡಗಿತು. ಹಿಂಸಾರೂಪ ತಾಳಿದ ರಾಜಕೀಯ ಪರಿಸರದಿಂದ ದೂರ ಓಡುವುದು ಅನಿವಾರ್ಯವಾಯಿತು. ಹೊಸ ಕನಸುಗಳನ್ನು ಕಟ್ಟಿಕೊಟ್ಟ ಮಾವನಮನೆ ಹಾಗೂ ಆ ಕನಸುಗಳಿಗೆ ರಂಗು ತುಂಬಿದ ಸುಮಿತ್ರಾಳನ್ನು ಬಿಟ್ಟು ಅವನು ರಾತ್ರಿಯಲ್ಲಿ ಮನೆಯನ್ನು ತೊರೆದ. ಮತ್ತೆ ಪಯಣ, ಹೊಸ ದಾರಿಯ ಅನುಭವ. ರೈಲಿನಲ್ಲಿ ಪರಿಚಯಗೊಂಡ ಜಯರಾಮ, ಆಶ್ರಯ ನೀಡಲೂ ಮುಂದಾದ. ಯಾವ ರಾಜಕಾರಣ ತಪ್ಪಿಸಿಕೊಳ್ಳಬೇಕೆಂದು ಆಲಿಂಬ್ರಾದಿಂದ ಪಲಾಯನ ಮಾಡಿದ್ದನೋ, ಅದೇ ರಾಜಕಾರಣ ಶ್ರೀಮಂಗಲದಲ್ಲೂ ಎದುರಾಯಿತು.

ಬ್ಯಾಂಕ್ ಮತ್ತು ಮನೆಯ ಟೆಲಿಫೋನ್ ಬಿಲ್ಲು ದುಪ್ಪಟ್ಟಾಯಿತು. ನಾವು ಪರಸ್ಪರ ಮಾತನಾಡುತ್ತಿದ್ದುದು ನಿಮಿಷಗಳಲ್ಲ, ಗಂಟೆಗಳು. ಮಾತನಾಡುವಾಗ ನಮಗೆ ಸಮಯದ ಪರಿವೆಯೇ ಇರುತ್ತಿರಲಿಲ್ಲ. ಬಿಲ್ಲು ಹೆಚ್ಚಾಗುತ್ತಿರುವ ವಿಷಯ ಅಂಕಲ್ ಮತ್ತು ಸುಮಕ್ಕ ಪರೋಕ್ಷವಾಗಿ, ತಮಾಷೆಯ ರೂಪದಲ್ಲಿ ಹೇಳುತ್ತಿದ್ದರು. ಆದರೂ ಬಿಲ್ಲಿನ ಮೊತ್ತ ಇಳಿಯಲಿಲ್ಲ.

ಒಂದು ದಿನ ಸುಮಿತ್ರಾ, ಅದೇ ಹಳೆಯ ಸುಮಿತ್ರಾ ನನ್ನ ಬಳಿಗೆ ಬಂದಳು. ಹೇಳದೆಕೇಳದೆ ನನ್ನ ಕನಸಿನೊಳಗೆ ನೇರವಾಗಿ ಬಂದುಬಿಟ್ಟಳು. ಕನಸಿನಲ್ಲಿ ಅವಳು ನನ್ನ ಪತ್ನಿ. ಅವಳು ನನಗೆ ಚಹ ಕೊಟ್ಟಳು. ಎಲೆಯಡಿಕೆ ಮಡಚಿಕೊಟ್ಟಳು. ನನ್ನ ಪಾದದ ಉಗುರುಗಳನ್ನು ಕತ್ತರಿಸಿದಳು. ಕಿವಿಯಿಂದ ತಲೆಗೆ ಹತ್ತಿದ ಒಂದು ಇರುವೆಯನ್ನು ತಲೆಗೆ ಮೊಟಕಿ ಕೆಳಗೆ ಬೀಳಿಸಿದಳು. ಆಗಷ್ಟೆ ನೋಡಿದ ಮೂರು ನರೆತ ತಲೆಗೂದಲನ್ನು ಬಲವಾಗಿ ಕಿತ್ತು ಹಾಕಿದಳು. ನೋವಾಯಿತಾ ಎಂದು ಕೇಳುತ್ತಾ ಅಲ್ಲಿ ಸವರಿದಳು. ಮತ್ತೆ ರೀ ಎಂದು ಕರೆಯುತ್ತಾ ಏನೋ ಕಿವಿಯಲ್ಲಿ ಪಿಸುನುಡಿದಳು.

ಅಷ್ಟರಲ್ಲಿ, ಅನಿರೀಕ್ಷಿತವಾಗಿ ಅಲ್ಲಿಗೆ ಶ್ರೀದೇವಿ ಬಂದಳು. ಸಿನಿಮಾದಲ್ಲಿ ನೋಡುವಂತೆ ತೆಳ್ಳಗಿನ ಸೀರೆಯನ್ನು ಹೊಕ್ಕಳ ಕೆಳಗೆ ಉಟ್ಟು, ಕೂದಲನ್ನು ಬಿಚ್ಚಿ, ಅಪ್ಸರೆಯಂತೆ ಬಂದಳು. ನಾನು ಭಯದಿಂದ ಕಂಪಿಸಿದೆ. ಅವಳೇನಾದರೂ ಸುಮಿತ್ರಾಳನ್ನು ಕಂಡರೆ ಏನು ಮಾಡಲಿ?

ಆದರೆ ಸುಮಿತ್ರಾ ಶ್ರೀದೇವಿಗೆ ಅಗೋಚರವಾಗಿದ್ದಳು. ನನ್ನ ಬಳಿಯಲ್ಲಿ ಯಾರೂ ಇಲ್ಲವೆಂದು ತಿಳಿದು ಶ್ರೀದೇವಿ ನಾನು ಕುಳಿತ ಕುರ್ಚಿಯ ಕೈಯಲ್ಲಿ ಬಂದುಕುಳಿತಳು. ನನ್ನ ಕೆನ್ನೆಗೆ ಮುತ್ತಿಟ್ಟಳು. ತಲೆಗೂದಲಿನಲ್ಲಿ ಕೈಯಾಡಿಸಿದಳು. ಮೂಗನ್ನು ಹಿಡಿದು ಸವರಿದಳು.

ಆದರೆ ಸುಮಿತ್ರಾಳಿಗೆ ಶ್ರೀದೇವಿ ಕಾಣಿಸುತ್ತಿದ್ದಳು. ಅವಳು ಚಂಗನೆ ಎದ್ದು ಬಂದು ಶ್ರೀದೇವಿಯ ಮುಖಕ್ಕೆ ಒಂದು ಏಟುಕೊಟ್ಟಳು. ಹೊಡೆದಿದ್ದು ನಾನೆಂದು ಭಾವಿಸಿ ಶ್ರೀದೇವಿ ನನ್ನತ್ತ ತಿರುಗಿ ಕೋಪದಲ್ಲಿ ಕೂಗಿದಳು. ತಕ್ಷಣ ಅವಳ ತುಟಿಗಳಿಂದ ಸಿಡುಬಿನ ಉಂಡೆಗಳು ಉದುರುತ್ತಿರುವುದನ್ನು ನಾನು ಕಂಡು ಬೆಚ್ಚಿದೆ.

ನಾನು ಕೂಗಾಡಿದೆ. ಆದರೆ ಉಳಿದ ಕನಸುಗಳಂತೆ ನನ್ನ ಕೂಗು ಹೊರಬರಲಿಲ್ಲ. ಎಲ್ಲಾ ಕನಸುಗಳಂತೆ ಈ ಕನಸೂ ಸುಖಾಂತವಾಯಿತೆ ಅಥವಾ ದುಃಖಾಂತವಾಯಿತೆ ಎಂದು ತಿಳಿಯುವ ಮೊದಲೇ ಮುರಿದುಬಿತ್ತು . ಮುರಿದು ಹೋಗುವಂತದ್ದು ಕನಸು, ಒಂದು ಕೊನೆಯನ್ನು ತಲುಪುವಂತದ್ದು ಕಥೆಯೂ ಆಗಿರುತ್ತದಲ್ಲವೆ? ಕಥೆಯಲ್ಲ, ಸಿನಿಮಾ. ಕನಸುಗಳನ್ನು ಶೇಖರಿಸುವ ಕಂಪ್ಯೂಟರ್ ಅನ್ನು ಒಂದಲ್ಲಾ ಒಂದು ದಿನ ಕಂಡು ಹಿಡಿಯುತ್ತಾರೆ. ಅಂದು ಕನಸುಗಳಿಗೆ ದೊಡ್ಡ ಮಾರುಕಟ್ಟೆಯಿರುತ್ತದೆ. ಹಲವಾರು ಮಂದಿಯ ಕನಸುಗಳನ್ನು ಎಡಿಟ್ ಮಾಡಿ ಒಳ್ಳೆಯ ಸಿನಿಮಾ ನಿರ್ಮಿಸುತ್ತಾರೆ. ಮುರಿದು ಬೀಳುವ ಕನಸುಗಳನ್ನೆಲ್ಲಾ ಸೇರಿಸಿ ಹೊಲಿದು ಪೂರ್ಣ ಸಿನಿಮಾ ನಿರ್ಮಿಸಬಹುದು. ಜೀವನದಂತೆ ದಿಢೀರ್ ಎಂದು ಕೊನೆಯಾಗುವ ನನ್ನ ಕನಸುಗಳನ್ನು ಎಡಿಟ್ ಮಾಡದೆ ಹ್ರಸ್ವ ಚಿತ್ರಗಳ ಉತ್ಸವಕ್ಕೆ ಕಳುಹಿಸಿದರೆ ಪ್ರಶಸ್ತಿಯೂ ಬರಬಹುದು.

ಮದುವೆ ಅದ್ದೂರಿಯಿಂದ ನೆರವೇರಿತು. ಯಾವ್ಯಾವುದೋ ರಾಜಕೀಯ ನಾಯಕರುಗಳು ಬಂದರು. ಅವರೊಂದಿಗೆ ಫೋಟೊ ತೆಗೆಸಿ ಕೊಂಡೆವು. ಗೋಪೀನಾಥನೆಂಬ ರಾಜಕೀಯ ನಾಯಕನೇನಾದರೂ ಆ ಫೋಟೊ ಕಂಡರೆ ಎಂಬ ಭಯ ನನ್ನನ್ನು ಕಾಡಿತ್ತು. ಅನೇಕ ಉಡುಗೊರೆಗಳು ಬಂದವು.

ಇದ್ದಕ್ಕಿದ್ದಂತೆ ಒಂದು ದಿನ, ಏನೂ ಇಲ್ಲದ ನಾನು, ಯಾರೋ, ಏನೋ ಆಗಿ ಉನ್ನತಿಗೇರಿದ್ದೆ. ಮುಗುಳ್ನಕ್ಕು, ಮುಗುಳ್ನಕ್ಕು ನನ್ನ ಕೆನ್ನೆಗಳು ನೊಂದವು. ಕೈಕುಲುಕಿ ಕುಲುಕಿ ನನ್ನ ತೋಳಿನ ಸಂಧಿಗಳು ದಣಿದವು. ರುಚಿಯಾದ ಭೋಜನವನ್ನು ಸವಿಯಲು ನನ್ನಿಂದ ಸಾಧ್ಯವಾಗಲಿಲ್ಲ. ಒಟ್ಟಾರೆ ಯಾಗಿ, ಒಂದು ಭಯ, ಸಂಕೋಚ. ಕನಸುಗಳಲ್ಲಿ ಆಗಾಗ ಕಾಣಿಸುವಂತೆ ನನ್ನ ಹೊಸ ಪಂಚೆ, ಎಲ್ಲಿ ಉದುರಿ ಬೀಳುತ್ತದೋ ಎಂಬ ಆತಂಕ.

ಉಂಗುರ ಬದಲಾಯಿಸುವಾಗ ನನ್ನ ಕೈ ಕಂಪಿಸಿತ್ತು. ಅದನ್ನು ಗಮನಿಸಿದ ಶ್ರೀದೇವಿ ಕಡೆಗಣ್ಣಿನಲ್ಲೇ ನಕ್ಕಳು. ಆದರೆ ಅವಳಿಗೆ ನಡುಕವಿರಲಿಲ್ಲ. ಹೆಣ್ಮಕ್ಕಳೇ ಹಾಗೆ. ಚಿರಪರಿಚಿತರಂತೆ ಅವರು ಹಸೆಮಣೆಯಲ್ಲಿ ನಡೆದುಕೊಳ್ಳುತ್ತಾರೆ.